ಒಂದು ವಿಚಿತ್ರವಾದ ಊಹಿಸಲಾರದ ಘಟನೆ ಸಂಭವಿಸಿತು. ಹದಿಮೂರು, ಹದಿನಾಲ್ಕರ ಕಿಶೋರ ವಯಸ್ಸಿನ ಹುಡುಗರಿಗೆ ಧ್ವನಿ ಒಡೆಯುವುದು ಸಾಮಾನ್ಯವಾದುದು. ಅದು ನೈಸರ್ಗಿಕ ಪ್ರಕ್ರಿಯೆ. ಆದರೆ, ರಘುವಿನ ಧ್ವನಿ ಒಡೆಯಲೇ ಇಲ್ಲ. ಮೊದಲೇ ಕೆಂಪುಬಣ್ಣದಿಂದ ಮಿರಿ ಮಿರಿ ಮಿಂಚುತ್ತಿದ್ದ ರಘುವಿನ ಧ್ವನಿ ಹುಡುಗಿಯ ಧ್ವನಿಯಂತೆ ಕೇಳಿಸುತ್ತಿತ್ತು. ಆಗ ಅವನ ಶಾಲೆಯ ಒಡನಾಡಿಗಳು ಅವನನ್ನು ಚುಡಾಯಿಸುತ್ತಿದ್ದರು.

"ಗುರುಗಳೇ, ರಘುನ್ನ ಹುಡುಗಿಯರ ಸಾಲಿನ್ಯಾಗ ಕೂಡಸ್ರಿ, ಅದು ಅವಗ ಒಪ್ತದ." ಗಂಡು ಹುಡುಗರು ಹೀಗೆ ಗೋಳು ಹೊಯ್ದುಕೊಳ್ಳುತ್ತಿದ್ದಾಗ, ಹುಡುಗಿಯರು ಕರವಸ್ತ್ರವನ್ನು ಬಾಯಿಯಲ್ಲಿ ಇಟ್ಟುಕೊಂಡು ಮುಸಿ ಮುಸಿ ನಗುತ್ತಿದ್ದರು. ಆಗ ಗುರುಗಳು ತಮ್ಮ ಕೈಯಲ್ಲಿದ್ದ ಬೆತ್ತದಿಂದ ಟೇಬಲ್ಲಿನ ಮೇಲೆ ಜೋರಾಗಿ ಬಡಿದು, 'ಸಾಕು ಇನ್ನ. ಸುಮ್ಮನ ಕೂಡ್ರಿ. ಪುಸ್ತಕಾ ತಗೀರಿ.' ಎನ್ನುತ್ತಿದ್ದರು. ಆಗ ರಘುನ ಮೂಗಿನ ತುದಿ ಕೆಂಪು ಆಗುತ್ತಿತ್ತು ಮತ್ತು ಕಣ್ಣುಗಳಿಂದ ನೀರು ಕೆಳಗಿದ್ದ ಪುಸ್ತಕದ ಮೇಲೆ ಟಪ ಟಪ ಎಂದು ಬೀಳುತ್ತಿತ್ತು.

"ಹ್ಯಾಂಗ ಹೆಂಗಸರಂಗ ಅಳ್ತಾನ ನೋಡ್ರಿ." ಹುಡುಗರು ಅವನಿಗೆ ಮತ್ತಷ್ಟು ಕೀಟಲೆ ಕೊಡುತ್ತಿದ್ದರು.

ಒಮ್ಮೆ ಶಾಲೆಯ ಗುರುಗಳು ಮನೆಗೆ ಬಂದು ದಾದಾನ ಜೊತೆಗೆ ಮಾತನಾಡಿ ಹೋದರು. ಅಂದು ರಘು ಶಾಲೆ ಮುಗಿಸಿ ಮನೆಗೆ ಬಂದಾಗ ಮನೆಯಲ್ಲಿ ಸೂತಕದ ವಾತಾವರಣ ಇತ್ತು. ಸ್ಮಶಾನ ಶಾಂತಿ ಪಸರಿಸಿತ್ತು. ದಾದಾ ತೂಗುಯ್ಯಾಲೆಯ ಮೇಲೆ ಕುಳಿತಿದ್ದರು. ಎದುರಿನ ಕುರ್ಚಿಯಲ್ಲಿ ಆಯುರ್ವೇದ ವೈದ್ಯರಾದ ನಾನಾಸಾಹೇಬ ಅವರು ಕುಳಿತಿದ್ದರು. ತಾಯಿ ನಡುಮನೆಯ ಹೊಸ್ತಿಲದ ಹತ್ತಿರ ಅಕ್ಕಿ ಆರಿಸುತ್ತ ಕುಳಿತಿದ್ದಳು.



ನಾನಾಸಾಹೇಬ ವೈದ್ಯರು ರಘುನನ್ನು ಆಪಾದಮಸ್ತಕ ನೋಡಿ ತಾಯಿಗೆ ಹೇಳಿದರು. "ಒಂದು ಚೂರ್ಣ ಕೊಡ್ತೇನಿ. ಅದನ್ನು ದಿನಕ್ಕೆ ಎರಡು ಸಲ ಕೊಡ್ರಿ. ಹದಿನೈದು ದಿನ ಕೊಡ್ರಿ. ಏನಾದರೂ ವ್ಯತ್ಯಾಸ ಕಾಣಸ್ತದೇನೋ ನೋಡ್ರಿ. ಇಲ್ಲದಿದ್ರ ಈ ಹುಣ್ಣಿಮಿಗೆ ಭೈರವನಾಥ ದೇವರಿಗೆ ಹೋಗಿ ಬೇಡಿಕೊಂಡು ಬರ್ರಿ. ಇನ್ನ, ನಿಮ್ಮ ಹಣೆ ಬರಹ ಹ್ಯಾಂಗ ಅದನೋ ಹಂಗ ಆಗ್ತದ. ಹುಲು ಮನುಷ್ಯರಾದ ನಾವೇನು ಮಾಡಲಿಕ್ಕೆ ಸಾಧ್ಯ ಅದ."

ಇದನ್ನು ಕೇಳಿ ತಾಯಿ ಬಿಕ್ಕಿ ಬಿಕ್ಕಿ ಅತ್ತಳು. ದಾದಾ ಬೇಸತ್ತು ನುಡಿದರು, "ಈಗ ಯಾಕ ಅಳತಿ? ನಾಲ್ಕು ಹುಡಗ್ಯಾರು ಹುಟ್ಟಿದ ಮ್ಯಾಲೆ ದೇವರು ನಮಗ ಈ ವಂಶದ ದೀಪಾ ಕೊಟ್ಟಾನ.